**ಹಿರಿಯ ಸಿವಿಲ್ ನ್ಯಾಯಾಧೀಶರವರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಚನ್ನಗಿರಿ.**

**OS 114/2022**

**ಪಿ ಡಬ್ಲ್ಯೂಃ 2.**

| | |
|---|---|
| ಹೆಸರುಃ | ರಾಜೇಶ್ ಹೆಚ್ ಆರ್ |
| ತಂದೆ/ಗಂಡನ ಹೆಸರುಃ | ವಿ ರಾಮಚಂದ್ರೇಗೌಡ. |
| ವಯಸ್ಸುಃ | 45 ವರ್ಷ |
| ಉದ್ಯೋಗಃ | ಸರ್ವೆಯರ್, ಆನೇಕಲ್ ತಾ. ಬೆಂಗಳೂರು. |
| ವಾಸಃ | ಬೆಂಗಳೂರು. |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕಃ 13-06-2024**

**ಮುಖ್ಯ ವಿಚಾರಣೆಃ ಶ್ರೀ. ಎಂ ಟಿ ಎಸ್ ವಾದಿ ಪರ ವಕೀಲರಿಂದಃ**

2018 ರಿಂದ 2022 ರ ವರೆಗೆ ನಾನು ಚನ್ನಗಿರಿಯ ತಹಶೀಲ್ದಾರ್ ಕಛೇರಿಯಲ್ಲಿ ಸರ್ವೇಯರ್ ಅಂತಾ ಕೆಲಸ ಮಾಡಿದ್ದೇನೆ.

ನಮ್ಮ ಕಛೇರಿ ವ್ಯಾಪ್ತಿಗೆ ಹಿಸ್ಸಾ ಪೋಡಿ, ದರಖಾಸ್ತ ಪೋಡಿ, ಹದ್ದುಬಸ್ತು ಪೋಡಿ, ಇ ಸ್ವತ್ತು ಕೋರಿ ಅರ್ಜಿಗಳು ಸಲ್ಲಿಕೆಯಾಗುತ್ತವೆ. ಸ.ನಂ.87/3 ಕೊಗಲೂರು ಗ್ರಾಮದ ಜಮೀನು ಚನ್ನಗಿರಿ ವ್ಯಾಪ್ತಿಗೆ ಬರುತ್ತದೆ. ದಿಃ03-10-2019 ರಂದು ವಾದಿ ಆನಲೈನ್ ಮೂಲಕ ದಾವ ಆಸ್ತಿಯನ್ನು ಹದ್ದುಬಸ್ತು ಸರ್ವೆ ಮಾಡಲು ಅರ್ಜಿ ಸಲ್ಲಿಸಿದ್ದರು. ಆನಲೈನ್ ಮೂಲಕ ವಾದಿ ಸಲ್ಲಿಸಿದ ಅರ್ಜಿ ನನಗೆ ಹಂಚಿಕೆಯಾಗಿತ್ತು. ಸದರಿ ಅರ್ಜಿ ನನಗೆ ಹಂಚಿಕೆಯಾದ ನಂತರ ನಾನು ಅರ್ಜಿದಾರ ಮತ್ತು ದಾವ ಆಸ್ತಿಯ ಅಕ್ಕ ಪಕ್ಕದವರಿಗೆ ದಿಃ14-11-2019 ರಂದು ದಾವ ಆಸ್ತಿಯನ್ನು ಅಳತೆ ಮಾಡಲು ಬರುವುದಾಗಿ ಹೇಳಿ ಮುಂಚಿತವಾಗಿ ಅರ್ಜಿ ನೋಟೀಸ್ ಜಾರಿ ಮಾಡಿದ್ದೆ. ಅರ್ಜಿದಾರ ತಾನು ಆನಲೈನ್ ಸಲ್ಲಿಸಿದ ಅರ್ಜಿಯಲ್ಲಿ ದಾವ ಆಸ್ತಿಯ ಬಾಜುದಾರರ ವಿವರ ನೀಡಿದ್ದರು. ದಾವ ಆಸ್ತಿಯ ಅಕ್ಕಪಕ್ಕದವರು ಎಂದರೆ ಪ್ರತಿವಾದಿ, ವೀರಭದ್ರಪ್ಪ ತಂದೆ ಮಹದೇವಪ್ಪ ರವರಿಗೆ ನೋಟೀಸ್ ಜಾರಿ ಮಾಡಿದ್ದೆ. ಪ್ರತಿವಾದಿಗೆ ನೀಡಿದ ನೋಟೀಸನ್ನು ಪ್ರತಿವಾದಿಯ ಮಗ ತೀರ್ಥಪ್ಪ ಕೆ ಹೆಚ್ ಎಂಬುವವರು ಸ್ವೀಕರಿಸಿದ್ದಾರೆ.

**OS 114/2022**

**<u>ಪಿ.ಡಬ್ಲ್ಯೂ: 2</u>**

ನೋಟೀಸು ಜಾರಿಗೊಳಿಸಿದ ನಂತರ ನಾನು ದಿಃ14-11-2019 ರಂದು ದಾವ ಆಸ್ತಿಗೆ ಹದ್ದುಬಸ್ತು ಅಳತೆಗಾಗಿ ಹೋಗಿದ್ದೆ. ಹಾಗೆ ಅಳತೆ ಕಾರ್ಯಕ್ಕೆ ನಾನು ಕಛೇರಿಯಿಂದ ದಾವ ಆಸ್ತಿಯ ಮೂಲ ಟಿಪ್ಪಣಿ ದಾಖಲೆ ಮತ್ತು ಹಿಸ್ಸಾ ಟಿಪ್ಪಣಿ ದಾಖಲೆ ತೆಗೆದುಕೊಂಡು ಹೋಗಿದ್ದೆ.

ದಿಃ14-11-2019 ರಂದು ನಾನು ದಾವ ಆಸ್ತಿಯ ಹದ್ದುಬಸ್ತು ಅಳತೆ ಮಾಡಿದ್ದೆ ಆ ಕಾಲಕ್ಕೆ ದಾವ ಆಸ್ತಿಯ ಉತ್ತರಕ್ಕೆ ಇರುವ ಹಿಡುವಳಿದಾರರಾದ ಸ.ನಂ.87/2 ಆಸ್ತಿಯ ಹಿಡುವಳಿದಾರ 17 ಗುಂಟೆ ದಾವ ಆಸ್ತಿಯಲ್ಲಿಯ ಜಮೀನನ್ನು ಒತ್ತುವರಿ ಮಾಡಿದ್ದು ಕಂಡು ಬಂದಿತ್ತು. ಸದರಿ ಒತ್ತುವರಿ ಜಾಗದ ಗುರುತಿಗಾಗಿ ನಾವು ಕಲ್ಲನ್ನು ನೆಟ್ಟಿದ್ದೇವು. ಹದ್ದುಬಸ್ತು ಅಳತೆ ಪೂರ್ಗೊಳಿಸಿದ ನಂತರ ನಾವು ದಾವ ಆಸ್ತಿಯಲ್ಲಿ ಮಹಜರ್ ಮಾಡಿದ್ದೆ. ಹದ್ದುಬಸ್ತು ಸ.ನಂ. ಆ ಕುರಿತು ನಕಾಶೆ ತಯಾರಿಸಿ ನನ್ನ ಮೇಲಾಧಿಕಾರಿ ಎ ಡಿ ಎಲ್ ಆರ್ ರವರಿಗೆ ಸಲ್ಲಿಸಿದ್ದೆ. ದಾವ ಆಸ್ತಿಯ ಅಳತೆ ಮಾಡುವ ಕಾಲಕ್ಕೆ ಪ್ರತಿವಾದಿ ಸ್ಥಳದಲ್ಲಿ ಹಾಜರು ಇದ್ದಿರಲಿಲ್ಲ. ಅಳತೆ ಮಾಡುವ ಕಾಲಕ್ಕೆ ಮತ್ತು ಗ್ರಾಮಸ್ಥರು ಹಾಜರಿದ್ದರು.

ಸಾಕ್ಷಿ ತಾನು ದಾವ ಆಸ್ತಿಯಲ್ಲಿ ಅಳತೆ ಮಾಡಲು ಹೋಗುವ ಕುರಿತು ನೀಡಿದ ನೋಟೀಸನ್ನು ನಿಪಿ 4 ರಂತೆ ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ತಾನು ದಾವ ಆಸ್ತಿಯ ಹದ್ದುಬಸ್ತು ಅಳತೆ ಮಾಡಿ ತಯಾರಿಸಿದ ನಕಾಶೆಯನ್ನು ನಿಪಿ 5 ರಂತೆ ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ತಾನು ದಾವ ಆಸ್ತಿಯ ಹದ್ದುಬಸ್ತು ಅಳತೆ ಮಾಡಿ ಸ್ಥಳದಲ್ಲಿ ಜರುಗಿಸಿದ ಮಹಜರನ್ನು ನಿಪಿ 6 ರಂತೆ ನೋಡಿ ಗುರುತಿಸಿರುತ್ತಾರೆ.

**<u>(ಪ್ರತಿವಾದಿ ಪರ ಯಾವುದೇ ಪ್ರತಿನಿಧಿತ್ವ ಇರದೇ ಇರುವ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)</u>**

**<u>ಮರುವಿಚಾರಣೆ ಇಲ್ಲ:</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ., ಚನ್ನಗಿರಿ.

**OS 114/2022**

**ಪಿ.ಡಬ್ಲ್ಯೂ: 2**